ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
**Bangalore Development Authority**

ಸಂಖ್ಯೆ: ಬೆಂಅಪ್ರಾ/ನಯೋಸ/ CLU-313/2012-13/ 6609 /2013-14.
No. :

ದಿನಾಂಕ :
Date : 1-3-14

# ಪ್ರಾರಂಭಿಕ ದೃಢೀಕರಣ ಪತ್ರ

ವಿಷಯ: ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ದೊಡ್ಡಕನ್ನಲ್ಲಿ ಗ್ರಾಮದ ಸರ್ವೆ ನಂ. 90/2 ಮತ್ತು 90/8 ರಲ್ಲಿನ 02 ಎಕರೆ 20 ಗುಂಟೆ ಅಥವಾ 10117.05 ಚ.ಮೀ. ವಿಸ್ತೀರ್ಣದ ಪ್ರದೇಶವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-ಎ [3] ರಂತೆ ಕೈಗಾರಿಕೆ [ಹೈಟೆಕ್] ಉಪಯೋಗದಿಂದ ವಸತಿ ಉಪಯೋಗಕ್ಕೆ ಭೂ-ಉಪಯೋಗ ಬದಲಾವಣೆ ಮಾಡುವಂತೆ ಶ್ರೀಮತಿ ಸುಧಾ ಕೋಂ ಪಾಪಯ್ಯ ರೆಡ್ಡಿ ರವರು ಕೋರಿರುವ ಬಗ್ಗೆ.

ಉಲ್ಲೇಖ:
1. ತಮ್ಮ ಅರ್ಜಿ ದಿನಾಂಕ 08.01.2013.
2. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-ಎ Sub section [3] ರಂತೆ ಕ್ರಮ ವಹಿಸಿರುವುದು.
3. ಈ ಕಛೇರಿಯ ಪತ್ರ ಸಂಖ್ಯೆ ಬೆಂಅಪ್ರಾ/ನಯೋಸ/CLU-313/12-13/5882/2013-14, ದಿನಾಂಕ 22.01.2014 ರಲ್ಲಿ ಭೂ ಉಪಯೋಗ ಬದಲಾವಣೆ ಸಂಬಂದ ಅರ್ಜಿದಾರರಿಗೆ ₹. 4,57,400/- ಗಳನ್ನು ಪಾವತಿಸಲು ತಿಳಿಸಿರುವುದು.
4. ಅರ್ಜಿದಾರರು ದಿನಾಂಕ 12.02.2014 ರಂದು ಕೆನರಾ ಬ್ಯಾಂಕ್ ನ ಚಲನ್ ನಂ. 22407 ರ ಮೂಲಕ ₹. 4,57,400/- ಗಳನ್ನು ಪ್ರಾಧಿಕಾರಕ್ಕೆ ಸಂದಾಯ ಮಾಡಿದ್ದು, ಇದನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆರ್ಥಿಕ ವಿಭಾಗದವರು ದಿನಾಂಕ 20.02.2014 ರಂದು ಹಣ ಸಂದಾಯವಾದ ಬಗ್ಗೆ ದೃಢೀಕರಿಸಿರುವುದು.

ಉಲ್ಲೇಖ[1] ರಲ್ಲಿನ ಅರ್ಜಿಯಲ್ಲಿ ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ದೊಡ್ಡಕನ್ನಲ್ಲಿ ಗ್ರಾಮದ ಸರ್ವೆ ನಂ. 90/2 ಮತ್ತು 90/8 ರಲ್ಲಿನ 02 ಎಕರೆ 20 ಗುಂಟೆ ಅಥವಾ 10117.05 ಚ.ಮೀ. ವಿಸ್ತೀರ್ಣದ ಪ್ರದೇಶವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-ಎ [3] ರಂತೆ ಕೈಗಾರಿಕೆ [ಹೈಟೆಕ್] ಉಪಯೋಗದಿಂದ ವಸತಿ ಉಪಯೋಗಕ್ಕೆ ಭೂ-ಉಪಯೋಗ ಬದಲಾವಣೆ ಕೋರಲಾಗಿರುತ್ತದೆ. ಈ ಸಂಬಂಧ ಉಲ್ಲೇಖ [2] ರಲ್ಲಿ ಅವಕಾಶ ಕಲ್ಪಿಸಿ ರುವಂತೆ ಉಲ್ಲೇಖ [3] ರಲ್ಲಿ ಒಟ್ಟು ಮೊತ್ತ ₹. 4,57,400/- [₹. ನಾಲ್ಕು ಲಕ್ಷದ ಐವತ್ತೇಳು ಸಾವಿರದ ನಾಲ್ಕುನೂರು ಮಾತ್ರ] ಗಳನ್ನು ಸಂದಾಯ ಮಾಡುವಂತೆ ತಿಳಿಸಿದ್ದು, ಮೇಲ್ಕಂಡ ಭೂ ಉಪಯೋಗ ಬದಲಾವಣೆಗೆ ಸಂಬಂಧಿಸಿದಂತೆ ₹. 4,57,400/- [₹. ನಾಲ್ಕು ಲಕ್ಷದ ಐವತ್ತೇಳು ಸಾವಿರದ ನಾಲ್ಕುನೂರು ಮಾತ್ರ] ಗಳನ್ನು ಪ್ರಾಧಿಕಾರಕ್ಕೆ ಸಂದಾಯ ಮಾಡಲಾಗಿದೆ. ಇದನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆರ್ಥಿಕ ವಿಭಾಗದವರು ಉಲ್ಲೇಖ [4] ರಂತೆ ದಿನಾಂಕ 20.02.2014 ರಂದು ಹಣ ಸಂದಾಯವಾದ ಬಗ್ಗೆ ದೃಡೀಕರಿಸಿರುತ್ತಾರೆ.

ಆದುದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14-ಎ Sub-section [3] ರಂತೆ [Deemed permission] ಅಡಿಯಲ್ಲಿ ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ದೊಡ್ಡಕನ್ನಲ್ಲಿ ಗ್ರಾಮದ ಸರ್ವೆ ನಂ. 90/2 ಮತ್ತು 90/8 ರಲ್ಲಿನ 02 ಎಕರೆ 20 ಗುಂಟೆ ಅಥವಾ 10117.05 ಚ.ಮೀ. ವಿಸ್ತೀರ್ಣದ ಪ್ರದೇಶವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-ಎ [3] ರಂತೆ ಕೈಗಾರಿಕೆ [ಹೈಟೆಕ್] ಉಪಯೋಗದಿಂದ ವಸತಿ ಉಪಯೋಗಕ್ಕೆ ಈ ಕೆಳಕಂಡ ನಿಭಂದನೆಗಳಿಗೊಳಪಡಿಸಿ ಭೂ ಬದಲಾವಣೆ ಆದೇಶ ನೀಡಲಾಗಿದೆ.

1. ಪ್ರಶ್ನಿತ ಪ್ರದೇಶದ ಬಡಾವಣೆ / ಕಟ್ಟಡ ನಕ್ಷೆಯನ್ನು ಸಕ್ಷಮ ಪ್ರಾಧಿಕಾರದಿಂದ ವಲಯ ನಿಯಮಾವಳಿ ಅನುಸಾರ ಮಂಜೂರು ಮಾಡಿಸಿಕೊಳ್ಳುವುದು.
2. ಪ್ರಸ್ತಾಪಿತ ಜಮೀನಿನ ಸಂಬಂಧವಾಗಿ ತಪ್ಪು ಮಾಹಿತಿ / ದಾಖಲಾತಿಗಳನ್ನು ನೀಡಿದ್ದಲ್ಲಿ ಅರ್ಜಿದಾರರೇ ಹೊಣೆಗಾರರಾಗುವುದಲ್ಲದೇ ಭೂ ಉಪಯೋಗದ ಆದೇಶ ತನ್ನಿಂತಾನಾಗಿಯೇ ರದ್ದಾಗುತ್ತದೆಂದು ತಿಳಿಯುವುದು.
3. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರಾಕ್ಷೇಪಣಾ ಪತ್ರ ಪಡೆಯುವುದು ಹಾಗೂ ಅದರಲ್ಲಿನ ಷರತ್ತುಗಳನ್ನು ಪಾಲಿಸತಕ್ಕದ್ದು. ಹಾಗೂ ಮಳೆ ನೀರು ಕೊಯ್ಲು" ವ್ಯವಸ್ಥೆಯನ್ನು ಕಡ್ಡಾಯವಾಗಿ ಅಳವಡಿಸತಕ್ಕದ್ದು.
4. ಸದರಿ ಪ್ರದೇಶದಲ್ಲಿ ಅನುಮೋದಿತ RMP-2015 ರ ಪ್ರಸ್ತಾಪಿತ 18 ಮೀ. ಅಗಲದ ರಸ್ತೆ ಪಂಕ್ತೀಕರಣ ಕಾಯ್ದಿರಿಸತಕ್ಕದ್ದು.
5. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ / ಸಕ್ಷಮ ಪ್ರಾಧಿಕಾರ ವಿಧಿಸುವ ಇನ್ನಿತರೆ ನಿಬಂಧನೆಗಳನ್ನು ಪಾಲಿಸತಕ್ಕದ್ದು.

[ಕರಡು ಪತ್ರ ಆಯುಕ್ತರವರಿಂದ
ಅನುಮೋದಿಸಲ್ಪಟ್ಟಿದೆ]

ಆಯುಕ್ತರ ಪರವಾಗಿ. 1/3
ಬೆಂಅಪ್ರಾ, ಬೆಂಗಳೂರು

ಇವರಿಗೆ

ಶ್ರೀಮತಿ ಸುಧಾ ಕೋಂ ಪಾಪಯ್ಯ ರೆಡ್ಡಿ,
ದೊಡ್ಡಕನ್ನಲ್ಲಿ ಗ್ರಾಮ,
ವರ್ತೂರು ಹೋಬಳಿ,
ಬೆಂಗಳೂರು ಪೂರ್ವ ತಾಲ್ಲೂಕು.

ಪ್ರತಿಯನ್ನು : ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ನರಸಿಂಹರಾಜ ಚೌಕ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.